

ಎಚ್.ಎಸ್. ಮುಕ್ತಾಯಕ್ಕ

# ನಿನ್ನ ಕವಿತೆಗಳು



## 1

ನಿನ್ನೊಡನೆ ಕಳೆದ ಆ ಸುಂದರ
ಗಳಿಗೆಗಳ ರೆಪ್ಪೆಯಡಿ ಬಚ್ಚಿಟ್ಟಿದ್ದೇನೆ
ನಾವು, ಆ ಕ್ಷಣಗಳ ಸೌರಮಂಡಲ
ದಾಚೆ ಒಯ್ಯೋಣ
ಕೊನೆ ಇರದ ಬಯಲಿನಲಿ ಸಾಗೋಣ
ಅಲ್ಲಿ ಯಾವ ಅವಧಿಗಳ, ದೇಶ
ಕಾಲಗಳ ಹಂಗಿಲ್ಲ
ಇನ್ನು ಸಮಯ ಕೇವಲ ಭ್ರಮೆ
ಮಾತ್ರ
ಅಲ್ಲಿ ದೂರದಲ್ಲಿ ನಾನು, ನೀನು ಮತ್ತು
ಬದುಕಿನಿಂದ ಕದ್ದ ಆ ಸುಂದರ
ಕ್ಷಣಗಳು ಮಾತ್ರ!



## 2

ನಿನ್ನನ್ನು ನಾನು ಅಕ್ಷರಗಳಲಿ
ಬಚ್ಚಿಟ್ಟಿರುವೆನು
ಎಲ್ಲಿ ಹೆಚ್ಚು ಹೇಳಿದರೆ ಎದೆಯ
ಭಾವ ಬಯಲಾಗುವುದೆಂದು
ಮುಚ್ಚಿಟ್ಟಿದ್ದೇನೆ
ಅಕ್ಷರಗಳೊಡನೆ ನಾನು ಆಟವಾಡುತ್ತ
ನಿನ್ನನ್ನು ಮರೆಯಲು
ಮತ್ತೆ ಕೆಲವು ಸಲ ಮನದ ಮಾತು
ನಿನಗೆ ಅರುಹಲು
ಬಯಸುವೆನು

## 3

ಈ ಮುನ್ನ ಎಂದೋ ಶರಧಿ
ಚಂದ್ರನನು ಮೋಹಿಸಿತ್ತು ಅಂತೆ
ಇಂದೂ ಉಕ್ಕೇರುತ್ತದೆ ಹುಣ್ಣಿಮೆಗೆ
ನಾನು ಶರಧಿಯಂತೆ,
ನಿನ್ನನ್ನು ಜನ್ಮಾಂತರದಿಂದ ಮೋಹಿಸಿದ್ದೇನೆ
ಅಧಿಗಳೆ ಕಳೆದರೂ ತಾರೆಗಳು
ಆಗಸಕ್ಕಂಟಿಕೊಂಡಿವೆ
ನಾನು ತಾರೆಯಂತೆ ನಿನ್ನ ಮೋಹಿಸಿದ್ದೇನೆ
ಅನಂತದಾಚೆ ಕೊನೆ ಇರದ ದಾರಿಗುಂಟ
ನಾವು ಸಾಗುವುದನು ನಾನು
ಮೋಹಿಸಿದ್ದೇನೆ